ದಿನಾಂಕಃ **12.06.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣವಚನ **ಬೋಧಿಸಲಾಯಿತು.**

ಮುಂದುವರೆದ ಮುಖ್ಯವಿಚಾರಣೆ : ನ್ಯಾಯಾಲಯದಿಂದಃ

ಕಳೆದ ಬಾರಿ ದಾಖಲೆಗಳಿಗೆ ನೀಡಿದ ಕ್ರಮ ಸಂಖ್ಯೆಯಲ್ಲಿ ವ್ಯತ್ಯಾಸ ಕಂಡು ಬಂದಿದ್ದರಿಂದ , ಅವುಗಳನ್ನು ಸರಿಪಡಿಸಿ **ನಿಪಿ5(ಎ) ಯಿಂದ ನಿಪಿ63(ಎ)** ಎಂದು ಸರಿಪಡಿಸಲಾಗಿದೆ.

ಪಾಟೀಸವಾಲು : ಪ್ರತಿವಾದಿಯ ಪರ ಶ್ರೀ ಎಸ್.ಎನ್.ಎಲ್. ವಕೀಲರಿಂದಃ

01. ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿ ಕೊಟ್ಟಿದ್ದೇನೆ. ಈ ದಾವೆಗೆ ಸಂಬಂಧಪಟ್ಟ ಎಲ್ಲಾ ಮಾಹಿತಿಗಳ ಬಗ್ಗೆ ನನಗೆ ತಿಳುವಳಿಕೆ ಇರುತ್ತದೆಯೇ? ಎಂದರೆ ಇರುತ್ತದೆ. ನಾನು ಸಿ.ಪಿ.ಎಡ್‌ವರೆಗೆ ವ್ಯಾಸಂಗ ಮಾಡಿದ್ದೇನೆ. ನಾನು ದಲ್ಲಾಳಿ ಮಂಡಿ ವ್ಯವಹಾರ ಮತ್ತು ರಿಯಲ್ ಎಸ್ಟೇಟ್ ವ್ಯವಹಾರ ಮಾಡುತ್ತೇನೆ. 1 ನೇ ವಾದಿ ಶ್ರೀಮತಿ ಶಾಂತಮ್ಮನ ಗಂಡ ಶ್ರೀ ಎಂ.ಎಂ. ಚನ್ನಯ್ಯನವರು ನನಗೆ ಎಷ್ಟು ವರ್ಷಗಳಿಂದ ಮತ್ತು ಹೇಗೆ ಪರಿಚಯ? ಎಂದರೆ ಅವರು ಕೂಡ್ಲಿಗಿಯಲ್ಲಿ ನಿವೃತ್ತ ಶಾಲಾ ಟೀಚರ್ ಆಗಿದ್ದು, ನಾನು ಮತ್ತು ಅವರು ಸುಮಾರು 12 ವರ್ಷಗಳ ಹಿಂದೆ ಪಾಲುದಾರಿಕೆಯಲ್ಲಿ ನಿವೇಶನಗಳ ಸ್ಕೀಮ್ ಮಾಡಿದ್ದೆವು, ಅಂದಿನಿಂದ ಅವರು ನನಗೆ ಪರಿಚಯ. 2016ರ ಒಪ್ಪಿಗೆ ಪತ್ರ ಚನ್ನಯ್ಯ ವರ್ಸಸ್ ಮಲ್ಲಿಕಾರ್ಜುನ ಇದರ ಬಗ್ಗೆ ನನಗೆ ಮಾಹಿತಿ ಇದೆಯೇ? ಎಂದರೆ ಮಾಹಿತಿ ಇರುತ್ತದೆ. ಸದರಿ 2016ರ ಒಪ್ಪಿಗೆ ಪತ್ರದಲ್ಲಿ ನನಗೆ ಯಾವುದೇ ವಿಧವಾದ ಪಾಲುದಾರಿಕೆ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ 2016ರ ಒಪ್ಪಿಗೆ ಪತ್ರದ ಪ್ರತಿಯನ್ನು ತೋರಿಸಿ ಇದರಲ್ಲಿ 1 ನೇ ಪಕ್ಷಕಾರರು ಯಾರು ಮತ್ತು 2 ನೇ ಪಕ್ಷಕಾರರು ಯಾರು? ಎಂದು ಕೇಳಿದ್ದು, ಸಾಕ್ಷಿಯವರು 1 ನೇ ಪಾರ್ಟಿ ಎಂ.ಎಂ.ಚನ್ನಯ್ಯ ಮತ್ತು 2 ನೇ ಪಾರ್ಟಿ ಮಲ್ಲಿಕಾರ್ಜುನ ಎಂದು ಹೇಳಿದ್ದಾರೆ. 2016ರ ಒಪ್ಪಿಗೆ ಪತ್ರದಲ್ಲಿ ನನ್ನ ಮತ್ತು 1 ನೇ ವಾದಿಯ ಹೆಸರುಗಳನ್ನು 3 ಮತ್ತು 4 ನೇ ಪಾರ್ಟಿ ಎಂದು ಬರೆಯಲಾಗಿದೆಯೇ? ಎಂದರೆ ಬರೆದಿದ್ದಾರೆ. 1 ನೇ ವಾದಿ ಮತ್ತು ನನ್ನ ಜೊತೆ 2016 ನೇ ಇಸವಿಯಲ್ಲಿ ಪ್ರತಿವಾದಿಗೆ ಯಾವುದೇ ಒಪ್ಪಿಗೆ ಪತ್ರ ಆಗಿರಲಿಲ್ಲ ಎಂದರೆ ಸರಿಯಲ್ಲ. 2016ರಲ್ಲಿ ನಮಗೆ ಮತ್ತು ಪ್ರತಿವಾದಿಗೆ ಒಪ್ಪಿಗೆ ಪತ್ರ ಆಗಿರುವ ಬಗ್ಗೆ ಯಾವುದಾದರೂ ದಾಖಲೆ ಹಾಜರು ಮಾಡಿದ್ದೀರಾ? ಎಂದರೆ ಮಾಡಿದ್ದೇನೆ. ಸದರಿ ಒಪ್ಪಂದವು ರೂ. 29 ಲಕ್ಷಕ್ಕೆ ಆಗಿತ್ತು, ಆ ಪತ್ರವನ್ನು 2016ರಲ್ಲಿ ಬರೆಯಲಾಗಿದ್ದು, ನನಗೆ ಅದರ ದಿನಾಂಕ ನೆನಪಿಲ್ಲ. 2016ರ ವ್ಯವಹಾರಕ್ಕೆ ಸಂಬಂಧಪಟ್ಟಂತೆ ನಾನು ಮತ್ತು 1 ನೇ ವಾದಿ ಈ ಪ್ರತಿವಾದಿಗೆ ರೂ. 29 ಲಕ್ಷ ಮೊತ್ತವನ್ನು ಬೇರೆ ಬೇರೆ ದಿನಾಂಕಗಳಂದು ಬೇರೆ ಬೇರೆ ಮೊತ್ತಗಳಲ್ಲಿ ಕೊಟ್ಟಿದ್ದೇವೆ. ಸದರಿ ಮೊತ್ತಗಳನ್ನು ನೀಡಿರುವ

ದಿನಾಂಕಗಳು ನನಗೆ ನೆನಪಿಲ್ಲ. ಸದರಿ ರೂ. 29 ಲಕ್ಷ ಮೊತ್ತವನ್ನು ನಾವು ಪ್ರತಿವಾದಿಗೆ ಬ್ಯಾಂಕ್ ಮೂಲಕ ಸಂದಾಯ ಮಾಡಿಲ್ಲ, ನಗದಾಗಿಯೇ ಸಂದಾಯ ಮಾಡಿದ್ದೇವೆ. ಪ್ರತಿವಾದಿಗೆ ರೂ. 29 ಲಕ್ಷ ಮೊತ್ತವನ್ನು ನಗದು ರೂಪದಲ್ಲಿ ಕೊಟ್ಟಿದ್ದೇವೆ ಎಂಬ ಬಗ್ಗೆ ಯಾವ ದಾಖಲೆಗಳನ್ನು ಹಾಜರು ಮಾಡಿದ್ದೀರಿ? ಎಂದರೆ ಅಗ್ರಿಮೆಂಟ್ ಹಾಜರು ಮಾಡಿದ್ದೇನೆ. ನಾನು 1 ನೇ ವಾದಿಯ ಗಂಡನ ಮಾತು ಕೇಳಿ ನನಗೆ ಮತ್ತು 2016ರ ಒಪ್ಪಿಗೆ ಪತ್ರಕ್ಕೆ ಯಾವುದೇ ಸಂಬಂಧ ಇಲ್ಲದಿದ್ದರೂ ಅದರಡಿಯಲ್ಲಿ ಪ್ರತಿವಾದಿಗೆ ರೂ. 29 ಲಕ್ಷ ಕೊಟ್ಟಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವ್ಯವಹಾರದಲ್ಲಿ ಪರಸ್ಪರ ಸರಿ ಬೀಳದಿದ್ದಲ್ಲಿ ಹಣ ವಾಪಸ್ಸು ಕೊಟ್ಟು ಅಗ್ರಿಮೆಂಟ್ ಕ್ಯಾನ್ಸಲ್ ಮಾಡಿಸಿಕೊಳ್ಳುತ್ತಾರೆ ಎಂದರೆ ಸರಿ. ಎಂ.ಎಂ. ಚನ್ನಯ್ಯ ಮತ್ತು ಪ್ರತಿವಾದಿ ಮಲ್ಲಿಕಾರ್ಜುನ 2016 ರ ಒಪ್ಪಿಗೆ ಪತ್ರವನ್ನು ಕಾನ್ಸಲ್ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ

***(ಮುಂದುವರೆದ ಪಾಟೀಸವಾಲಿಗೆ ಸಮಯ ಕೋರಿದ್ದರಿಂದ ಮುಂದೂಡಿತು).***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಗಿದೆ)
ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಜೆ.ಎಂ.ಎಫ್.ಸಿ. ಹಗರಿಬೊಮ್ಮನಹಳ್ಳಿ